# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

ಓ ಎಸ್ ನಂ.559-2017                    ಪಿ . ಡಬ್ಲುಃ 2

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಟಿ.ಎಸ್.ರಾಜಗೋಪಾಲ್<br>ತಮ್ಮಡಹಳ್ಳಿ ಗ್ರಾಮ, ಚಾಮರಾಜನಗರ ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 01-06-2024. |

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ.ವೈ  ರವರಿಂದಃ</u>**

ನಾನು 10 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಸುಮಾರು 25 ವರ್ಷಗಳಿಂದ ಪತ್ರಬರಹಗಾರನಾಗಿ ಕೆಲಸ ಮಾಡುತ್ತಿರುತ್ತೇನೆ ನನಗೆ ಪತ್ರಬರಹಗಾರನಾಗಿ ಒಳ್ಳೆಯ ಅನುಭವ ಇದೆ ಎಂದರೆ ಸರಿ. ನಾನು ಪತ್ರಬರಹಗಾರನಾಗಿ ಕಾರ್ಯ ನಿರ್ವಹಿಸಲು ಲೈಸೆನ್ಸ್ ಅನ್ನು ಪಡೆದಿರುತ್ತೇನೆ ಎಂದರೆ ಸರಿ. ನಾನು ಸುಮಾರು 2 ವರ್ಷಗಳಿಂದ ಪತ್ರಬರಹಗಾರನಾಗಿ ಕೆಲಸ ನಿರ್ವಹಿಸುವುದನ್ನು ನಿಲ್ಲಿಸಿರುತ್ತೇನೆ. ನಾನು ನಮ್ಮ ಊರಾದ ತಮ್ಮಡಹಳ್ಳಿಯ ನನ್ನ ನಿವಾಸದಲ್ಲಿಯೇ ಕಚೇರಿಯನ್ನು ಇಟ್ಟುಕೊಂಡಿದ್ದೆನು. ನಾನು ನನ್ನ ಕಚೇರಿಯಲ್ಲಿ ಪೆನ್, ಪೆನ್ಸಿಲ್, ಪೇಪರ್ ಮತ್ತು ಇಂಕ್ ಪ್ಯಾಡ್ ಗಳನ್ನು ಇಟ್ಟುಕೊಂಡಿದ್ದೆನು ಎಂದರೆ ಸರಿ. ಸಾಮಾನ್ಯವಾಗಿ ಅವಿದ್ಯಾವಂತರು ಬಂದರೆ  ನನ್ನ ಕಚೇರಿಯಲ್ಲಿ ಇದ್ದ ಇಂಕ್ ಪ್ಯಾಡ್ ನಿಂದ ಅವರ ಹೆಬ್ಬೆಟ್ಟಿನ ಗುರುತನ್ನು ಹಾಕಿಸುತ್ತೇನೆ ಎಂದರೆ ಸರಿ. ನನ್ನ ಕಚೇರಿಯಲ್ಲಿ ಇದ್ದ ಇಂಕ್ ಪ್ಯಾಡ್ ಅನ್ನು ಹೊರತುಪಡಿಸಿ ನಾನು ಬಂಡಿ ಕಪ್ಪನ್ನು ಉಪಯೋಗಿಸುವುದಿಲ್ಲ ಎಂದರೆ ಸರಿ.

2. ಸಾಕ್ಷಿಗೆ ನಿಪಿ-7 ಅನ್ನು ತೋರಿಸಿ, ನಿಪಿ-7 ಕ್ಕೆ ಇಂಕ್ ಪ್ಯಾಡ್‌ನಿಂದ ಹೆಬ್ಬೆಟ್ಟಿನ ಗುರುತನ್ನು ಹಾಕಿಸಿರುವುದಿಲ್ಲ, ಬಂಡಿಕಪ್ಪಿನಿಂದ ಹೆಬ್ಬೆಟ್ಟಿನ ಗುರುತನ್ನು

ಹಾಕಿಸಲಾಗಿರುತ್ತದೆ ಎಂಬ ಪ್ರಶ್ನೆಗೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-7 ಅನ್ನು ತೋರಿಸಿ ವಿಭಾಗದಾರರ ಸಹಿಯ ಕಾಲಂನಲ್ಲಿರುವ 2 ಮತ್ತು 4 ನೇ ವಿಭಾಗದಾರರ ಹೆಬ್ಬೆಟ್ಟಿನ ಗುರುತನ್ನು ಶಾಹಿಯಿಂದ ಹಾಕಿಸಿದ್ದು, 3 ಮತ್ತು 5 ನೇ ವಿಭಾಗದಾರರ ಹೆಬ್ಬೆಟ್ಟಿನ ಗುರುತನ್ನು ಬಂಡಿಕಪ್ಪಿನಿಂದ ಹಾಕಿಸಲಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ನಮ್ಮ ಕಚೇರಿಯಲ್ಲಿ ಸಾಮಾನ್ಯವಾಗಿ ದಸ್ತಾವೇಜು ಹಾಳೆ ಅನ್ನು ಇಟ್ಟುಕೊಳ್ಳಲಾಗಿರುತ್ತದೆ ಎಂದರೆ ಸರಿ. ನಿಪಿ-7 ಅನ್ನು ಬರೆಯಲು ಉಪಯೋಗಿಸಿರುವ ದಸ್ತಾವೇಜು ಹಾಳೆಯೂ ನಮ್ಮ ಕಚೇರಿಯದ್ದಾಗಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ದಾಖಲಾತಿ ಬರೆಯಬೇಕಾದರೆ ಆ ದಿನ ಖರೀದಿ ಮಾಡಿದ ಅಥವಾ ಅದಕ್ಕೂ ಹಿಂದೆ ಖರೀದಿ ಮಾಡಿದ ದಸ್ತಾವೇಜು ಹಾಳೆ ಅಥವಾ ಛಾಪಾಕಾಗದಲ್ಲಿ ಬರೆಯಲಾಗುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಮುಂದಿನ ದಿನಾಂಕದ ದಸ್ತಾವೇಜು ಹಾಳೆ ಅಥವಾ ಛಾಪಾ ಕಾಗದದಲ್ಲಿ ದಾಖಲಾತಿಯನ್ನು ಬರೆಯಲಾಗುವುದಿಲ್ಲ ಎಂದರೆ ಸರಿ. ನಿಪಿ-7 ಅನ್ನು ದಿ.12-03-2009 ರಲ್ಲಿ ಖರೀದಿಸಲಾಗಿರುತ್ತದೆ ಎಂದರೆ ಸರಿ. ನಿಪಿ-7 ಅನ್ನು ದಿ.16/02/2009 ರಲ್ಲಿ ಬರೆಯಲಾಗಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಪತ್ರವನ್ನು ಬರೆದಾಗ ಪ್ರತಿ ಪುಟಗಳಲ್ಲಿಯೂ ಪಕ್ಷಕಾರರ ಸಹಿಗಳನ್ನು ಪಡೆಯಲಾಗುತ್ತದೆ ಎಂದರೆ ಸರಿ. ನಿಪಿ-7 ರ ಮೊದಲ 3 ಪುಟಗಳಲ್ಲಿ ಪಕ್ಷಕಾರರ ಸಹಿಯನ್ನು ಪಡೆದಿರುವುದಿಲ್ಲ ಎಂದರೆ ಸರಿ. ನಿಪಿ-7 ರ 4 ನೇ ಪುಟದಲ್ಲಿ ನನ್ನ ಮೊಹರು ಮತ್ತು ಸಹಿಯೂ ಕೆಳಭಾಗದ ತುದಿಯಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಪಿ-7 ಅನ್ನು ತೋರಿಸಿ ಸಾಕ್ಷಿದಾರರ ಸಹಿಗಳಿಗೂ ಹಾಗೂ ನನ್ನ ಸಹಿಗೂ ಅಂತರ ಇರುತ್ತದೆ ಎಂದರೆ ಸರಿ. ಮಹದೇವಶೆಟ್ಟಿ ಎಂಬ ಗ್ರಾಮಸ್ಥರ ಹೆಬ್ಬೆಟ್ಟಿನ ಗುರುತನ್ನು ಸಹ ಬಂಡಿಕಪ್ಪಿನಿಂದ ಮಾಡಲಾಗಿರುತ್ತದೆ ಎಂದರೆ ಸರಿ. ನಿಪಿ-7 ರಲ್ಲಿರುವ ರಂಗಶೆಟ್ಟಿರವರ ಸಹಿಯೂ 1 ನೇ ಪ್ರತಿವಾದಿಯದ್ದಲ್ಲ ಎಂದರೆ ಸರಿಯಲ್ಲ. ನಿಪಿ-7 ಅನ್ನು ನಾನು ಮತ್ತು ವಾದಿಗಳು ಸೇರಿಸಿಕೊಂಡು ಸೃಷ್ಟಿಮಾಡಿದ ಸುಳ್ಳು ದಾಖಲಾತಿ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ-7 ರಲ್ಲಿ ನಮೂದಿಸಿರುವಂತೆ

ವಿಭಾಗದ ಪ್ರಕ್ರಿಯೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ ಸಾಮಾನ್ಯವಾಗಿ ಪತ್ರಗಳಲ್ಲಿ ತಿದ್ದುಪಡಿ ಮಾಡಿದ ಸಮಯ ನಾನು ಮತ್ತು ಪಕ್ಷಕಾರರು ಚುಟುಕು ಸಹಿಯನ್ನು ಹಾಕುತ್ತೇವೆ ಎಂದರೆ ಸರಿ. ನಿಪಿ–7 ರಲ್ಲಿ ಸುಮಾರು 5 ಕಡೆ ತಿದ್ದುಪಡಿ ಆಗಿದ್ದು ಸದರಿ ತಿದ್ದುಪಡಿಗಳ ಕೆಳಗೆ ಪಕ್ಷಕಾರರು ಚುಟುಕು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ–7 ರ ದಾಖಲೆಯೂ ನಿಜವಾದ ವಿಭಾಗ ಪತ್ರವಲ್ಲ ಈ ಪ್ರಕಣಕ್ಕಾಗಿ ಸೃಷ್ಟಿಸಲಾದ ದಾಖಲಾತಿ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ವಾದಿಗಳಿಗೆ ಸಹಾಯ ಮಾಡಲು ಉದ್ದೇಶದಿಂದ ವಾಸ್ತವಾಂಶಕ್ಕೆ ವಿರುದ್ಧವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**